“ಮಕ್ಕಳು ಮಾಹಿತಿ ತುಂಬಬೇಕಾದ ಖಾಲಿ ಕೊಡಗಳಲ್ಲ”

ಶ್ರೀಶೈಲ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕರಡ್ಕಲ್ ಕ್ಯಾಂಪ್
ಸುರಪುರ ಬ್ಲಾಕ್, ಯಾದಗಿರಿ ಜಿಲ್ಲೆ, ಕರ್ನಾಟಕ

ಸುರಪುರ ತಾಲ್ಲೂಕು ಎಂದರೆ ಸುರಪುರ, ನಾರಾಯಣಪುರ ಮತ್ತು ಕೆಂಭಾವಿ ಎಂಬ ಮೂರು ಒಂದರ ಜೊತೆಗೆ ಇನ್ನೊಂದು ಬೆಸೆದುಕೊಂಡಂಥ ಪ್ರದೇಶಗಳು. ಕೆಂಭಾವಿಯಲ್ಲಿರುವ ಒಂದು ಸಣ್ಣ ಹಳ್ಳಿಯೇ ಕರಡ್ಕಲ್ ಕ್ಯಾಂಪ್. ಇಲ್ಲಿನ ನಿವಾಸಿಗಳಲ್ಲಿ ಪರಿಶಿಷ್ಟ ಜಾತಿಯವರು ಹಾಗೂ ಮುಸಲ್ಮಾನರೇ ಹೆಚ್ಚು. ಅಲ್ಪಪ್ರಮಾಣದಲ್ಲಿ ಪ್ರಬಲ ರೆಡ್ಡಿ ಸಮುದಾಯದವರಿದ್ದಾರೆ. ಇಲ್ಲಿ ಒಂದರಿಂದ ಐದನೇ ತರಗತಿವರೆಗಿನ ಕಿರಿಯ ಪ್ರಾಥಮಿಕ ಶಾಲೆಯೊಂದಿದೆ. ಇದು 2004ರಲ್ಲಿ ಆರಂಭವಾಯಿತು. ಸಣ್ಣ ಗ್ರಾಮದ ಶಾಲೆಯಾದ್ದರಿಂದ ಇಲ್ಲಿ ನಲವತ್ತೆರಡು ವಿದ್ಯಾರ್ಥಿಗಳು ಮಾತ್ರ ಇದ್ದಾರೆ.

ಬಹುತೇಕ ಈ ಶಾಲೆಯ ಆರಂಭದಿಂದಲೂ ಶ್ರೀಶೈಲ ಇಲ್ಲಿದ್ದಾರೆ. ವಿಜಯಪುರ ಮೂಲದವರಾದ ತರುಣ ಶ್ರೀಶೈಲ, ಪಿಯುಸಿ ಮಾಡಿ ಟಿಸಿಎಚ್ (ಟೀಚರ್ ಸರ್ಟಿಫಿಕೇಟ್ ಹೈಯರ್)ಅನ್ನು ಮುಗಿಸುತ್ತಿದ್ದಂತೆ ಕೆಲಸ ಸಿಕ್ಕಿ ಇಲ್ಲಿಗೆ ನೇಮಕಗೊಂಡರು. ಕರಡ್ಕಲ್ ಕ್ಯಾಂಪ್‌ನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಸೇರಿದಾಗ, ಅಲ್ಲಿದ್ದದ್ದು ಕೇವಲ ಒಂದು ಕೊಠಡಿ. ಆಗತಾನೆ ಕೆಲಸಕ್ಕೆ ಸೇರಿದ ಇನ್ನೊಬ್ಬ ಸಹೋದ್ಯೋಗಿಯನ್ನೂ ಜೊತೆಗೂಡಿಕೊಂಡು ಶ್ರೀಶೈಲರು ಹಳ್ಳಿಯಲ್ಲಿ ಮನೆಯಿಂದ ಮನೆಗೆ ಸುತ್ತಾಡಿ ಪೋಷಕರನ್ನು ಒಪ್ಪಿಸಿ ಮೊದಲನೆಯ ತರಗತಿಗೆ ಇಪ್ಪತ್ತು ಮಕ್ಕಳನ್ನು ನೊಂದಾಯಿಸಿಕೊಂಡರು. ಒಂದೊಂದೇ ಹೆಜ್ಜೆ ಮುಂದುವರೆಯುತ್ತಾ, ಪ್ರತಿವರ್ಷವೂ ಒಂದೊಂದು ಹೊಸ ತರಗತಿಗಳನ್ನು ಆರಂಭಿಸಿದರು. ಎಸ್‌ಡಿಎಂಸಿ ಅಧ್ಯಕ್ಷರಿಂದ ಅತ್ಯುತ್ತಮ ಬೆಂಬಲ ದೊರೆಯಿತು. ಇಬ್ಬರೂ ಜೊತೆಗೂಡಿ ಇನ್ನೊಂದು ಕೊಠಡಿಯನ್ನು ಕಟ್ಟಿಸಿಕೊಂಡರು. ಅಧ್ಯಕ್ಷರು 4,000 ರೂ ದೇಣಿಗೆ ನೀಡಿದರೆ, ಇಬ್ಬರು ಶಿಕ್ಷಕರೂ ಸಹ 2,000 ರೂ.ಗಳನ್ನು ತಮ್ಮ ಸಂಬಳದಿಂದಲೇ ಉಳಿಸಿ ಸೇರಿಸಿದರು. ಈ ಹಣದಿಂದ ಶಾಲೆಗೆ ಅಗತ್ಯವಿದ್ದ ಕೆಲವೊಂದು ಮೂಲಭೂತ ಸಾಮಗ್ರಿಗಳನ್ನು ಖರೀದಿಸಿದರು.

ಈಗ ಕರಡ್ಕಲ್ ಕ್ಯಾಂಪ್‌ನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಯಾರೇ ಭೇಟಿ ನೀಡಿದರೂ ಚೆನ್ನಾಗಿ, ಶುಚಿಯಾಗಿ ಇರುವ ಶಾಲೆ, ಸುಂದರವಾದ ಕೈತೋಟ, ಉತ್ತಮ ಸ್ಥಿತಿಯಲ್ಲಿರುವ ಶೌಚಾಲಯ ಇವುಗಳನ್ನೆಲ್ಲ ನೋಡಿ ಸಂತೋಷ ಪಡುವುದು ಸಹಜ. ಇದು ರಾತ್ರಿ ಬೆಳಗಾಗುವುದರಲ್ಲಿ ನಡೆದ ಅಭಿವೃದ್ಧಿಯಲ್ಲ. ಶ್ರೀಶೈಲ ಅವರು ಹನ್ನೆರಡು ವರ್ಷಗಳ ಪರಿಶ್ರಮದಿಂದ ಇವನ್ನೆಲ್ಲ ನಿರ್ಮಿಸಿ ಈ ಸ್ಥಿತಿಗೆ ತಂದಿದ್ದಾರೆ. ಈತ ಇಲ್ಲಿನ ಸಮುದಾಯದೊಂದಿಗೆ ಮತ್ತು ಎಸ್‌ಡಿಎಂಸಿಯೊಂದಿಗೆ ಅತ್ಯುತ್ತಮ ಸಂಬಂಧವನ್ನು ಬೆಳೆಸಿಕೊಂಡಿದ್ದಾರೆ. ಪೋಷಕರೊಂದಿಗಿನ ಅವರ ಸಂಬಂಧವು ಪರಸ್ಪರ ನಂಬಿಕೆ, ವಿಶ್ವಾಸದ ಮೇಲೆ ಆಧರಿತವಾಗಿದೆ. ಮೊದಲು ಕೆಲಸವನ್ನು ಆರಂಭಿಸಿದಾಗ ಶ್ರೀಶೈಲ ಪ್ರತಿಯೊಂದು ಮನೆಗೂ ಭೇಟಿ ನೀಡಿ ಪೋಷಕರೊಂದಿಗೆ ಮಕ್ಕಳನ್ನು ಶಾಲೆಗೆ ಕಳಿಸಿಕೊಡಿ ಎಂದು ಬೇಡಿಕೊಳ್ಳಬೇಕಿತ್ತು. ಪ್ರತಿಯೊಬ್ಬ ಎಸ್‌ಡಿಎಂಸಿ ಸದಸ್ಯರ ಮನೆಗೂ ಹೋಗಿ ದಯಮಾಡಿ ಸಭೆಗಳಿಗೆ ಬನ್ನಿ ಎಂದು ವಿನಂತಿ ಮಾಡಿಕೊಳ್ಳಬೇಕಿತ್ತು. ಆದರೆ ಈಗ ವಿಷಯ ತಿಳಿಸಿದರೆ ಸಾಕು ಅವರೆಲ್ಲರೂ ಶಾಲೆಗೆ ಸಂಬಂಧಿಸಿದ ಕೆಲಸಗಳಿಗೆ, ಸಭೆಗಳಿಗೆ ಬಂದು ಸೇರುತ್ತಾರೆ. ಶಾಲೆಯು ಹಳೆಯ ವಿದ್ಯಾರ್ಥಿಗಳೊಡನೆಯೂ ಉತ್ತಮ ಸಂಬಂಧವನ್ನು ಹೊಂದಿದೆ; ಅವರು ಆಗಾಗ್ಗೆ ಶಾಲೆಗೆ ಬರುತ್ತಾರೆ. ನಾವು ಅಲ್ಲಿಗೆ ಹೋದ ದಿನವೇ ಮೊರಾರ್ಜಿ ಶಾಲೆಯಲ್ಲಿ ಈಗ ಓದುತ್ತಿರುವ ಇಬ್ಬರು ಹಳೆಯ ವಿದ್ಯಾರ್ಥಿಗಳು ಶ್ರೀಶೈಲ ಅವರನ್ನು ಕಾಣಲು ಬಂದಿದ್ದರು.

ಕಾಕತಾಳೀಯವೆಂಬಂತೆ ಮಾರನೆಯ ದಿನವೇ ಶಾಲೆಯ 8ನೆಯ ವಾರ್ಷಿಕೋತ್ಸವ ನಡೆಯುವುದಿತ್ತು. ನಾವು ಆ ಕಾರ್ಯಕ್ರಮದ ಬಗ್ಗೆಯೂ ಮಾತನಾಡಿದೆವು. 2009ರಲ್ಲಿ ಮೊದಲ ತಂಡದ ವಿದ್ಯಾರ್ಥಿಗಳು 5ನೆಯ ತರಗತಿಯನ್ನು ಮುಗಿಸಿದಾಗ ಮೊದಲನೆಯ ವಾರ್ಷಿಕೋತ್ಸವವನ್ನು ಆಚರಿಸಲಾಗಿತ್ತು. ಮುಂದಿನ ವರ್ಷಗಳಲ್ಲಿ ಹಳೆಯ ವಿದ್ಯಾರ್ಥಿಗಳು ತಾವಾಗಿಯೇ ಬಂದು ವಾರ್ಷಿಕೋತ್ಸವದಲ್ಲಿ ತೊಡಗಿಸಿಕೊಂಡು,

ಸಂಘಟಿಸಿ, ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾರೆ. ಸಮುದಾಯವೂ ಇದಕ್ಕೆ ಧನಸಹಾಯ ಮಾಡುತ್ತದೆ. ಕರಡ್ಕಲ್ ಕ್ಯಾಂಪ್‌ನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿಂದ ಹೊರಬರುವ ಪ್ರತಿಯೊಬ್ಬ ವಿದ್ಯಾರ್ಥಿಗೂ ಶಾಲೆಯು ಒಂದು ಶಬ್ದಕೋಶ ಅಥವಾ ಇನ್ಯಾವುದಾದರೂ ಪುಸ್ತಕವನ್ನು ಉಡುಗೊರೆ ಕೊಡುವುದು ವಾಡಿಕೆಯಾಗಿದೆ.

ವಿದ್ಯಾರ್ಥಿಗಳ ಗುಣಮಟ್ಟವನ್ನು ಗಮನಿಸಿದರೆ ಶಾಲೆಯು ಕೊಡುವ ಶಿಕ್ಷಣದ ಗುಣಮಟ್ಟ ಸ್ವಯಂವೇದ್ಯವಾಗುತ್ತದೆ. ಪ್ರತಿವರ್ಷವೂ ಐದನೇ ತರಗತಿಯ ಒಂಭತ್ತು ವಿದ್ಯಾರ್ಥಿಗಳಲ್ಲಿ ನಾಲ್ಕು ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮೊರಾರ್ಜಿ ಶಾಲೆಯನ್ನು ಸೇರುತ್ತಾರೆ. ಈ ಪರೀಕ್ಷೆಗೆ ಶ್ರೀಶೈಲರೂ ಅವರ ಸಹೋದ್ಯೋಗಿಯೂ ಪ್ರತಿದಿನವೂ ಒಂದಿಷ್ಟು ಸಮಯವನ್ನು ವಿನಿಯೋಗಿಸಿ, ಪರಿಶ್ರಮ ವಹಿಸಿ ಮಕ್ಕಳನ್ನು ತಯಾರು ಮಾಡುತ್ತಾರೆ. ಶಾಲೆಗೆ 'ಅತ್ಯುತ್ತಮ ವಿದ್ಯಾರ್ಥಿ ಸ್ನೇಹಿ ಪ್ರಶಸ್ತಿ' ಬಂದಿದೆ. ಶ್ರೀಶೈಲ ಅವರಿಗೆ 'ಅತ್ಯುತ್ತಮ ನಲಿ–ಕಲಿ ಶಿಕ್ಷಕ' ಪ್ರಶಸ್ತಿ ದೊರಕಿದೆ. ಶಾಲೆಯು ಉತ್ತಮ ಮಟ್ಟವನ್ನು ಸಾಧಿಸಿರುವುದಕ್ಕೆ ಅಲ್ಲಿನ ಸಮುದಾಯದವರಿಗೆ ಗಾಢವಾದ ಮೆಚ್ಚುಗೆ ಇದೆ. ತಮ್ಮ ಹಳ್ಳಿಯಂತಹ ಕುಗ್ರಾಮದ ಶಾಲೆಗೆ ಇದು ಎಂಥ ಅಸಾಧಾರಣ ಸಾಧನೆ ಎಂಬುದು ಅವರಿಗೆ ಅರ್ಥವಾಗಿದೆ. ಅವರಲ್ಲಿ ಶಾಲೆಯ ಬಗ್ಗೆ ಹೆಮ್ಮೆ ಇದೆ; ಶಾಲೆಯ ಧೀರೋದಾತ್ತ ಶಿಕ್ಷಕನ ಬಗ್ಗೆ ತುಂಬು ಮಮತೆಯೂ ಇದೆ.

ಶ್ರೀಶೈಲ ಅವರ ವಾಸ ಹತ್ತು ಕಿಲೋಮೀಟರ್ ದೂರದ ಕೆಂಭಾವಿಯಲ್ಲಿ. ಅವರು ಶಾಲೆಗೆ ಮೋಟರ್ ಬೈಕ್‌ನಲ್ಲಿ ಪ್ರಯಾಣ ಮಾಡುತ್ತಾರೆ. ಬೆಳಿಗ್ಗೆ 9–30 ರಿಂದ ಸಂಜೆ 4–30ರ ವರೆಗೆ ತಪ್ಪದೆ ಶಾಲೆಯಲ್ಲಿ ಇರುತ್ತಾರೆ. ವಿವಿಧ ತರಗತಿಗಳಿಗೆ ಬೋಧಿಸಬೇಕಾದ ಸವಾಲುಗಳನ್ನು ಎದುರಿಸಲು ತಮ್ಮದೇ ಆದ ವಿಧಾನವನ್ನು ರೂಪಿಸಿಕೊಂಡಿದ್ದಾರೆ. ತಾಲ್ಲೂಕು ಮಟ್ಟದ ಯಾವುದೇ ಶೈಕ್ಷಣಿಕ ಅಧಿಕಾರಿ 2007ರಿಂದ ಇತ್ತ ಸುಳಿದಿಲ್ಲ; ಹೀಗಾಗಿ ಇವರು ಅಗತ್ಯವಿರುವ ಎಲ್ಲ ಸ್ವಾಯತ್ತತೆಯನ್ನೂ ಹೊಂದಿದ್ದಾರೆ. ಅವರೇ ಶಾಲೆಯ ಕೆಲಸದ ವೇಳಾಪಟ್ಟಿಯನ್ನು ಅನುಕೂಲಕ್ಕೆ ಒಗ್ಗುವಂತೆ ಜಾಣ್ಮೆಯಿಂದ ಸಡಿಲವಾಗಿ ರೂಪಿಸಿಕೊಂಡಿದ್ದಾರೆ. ವಿಷಯ ಬೋಧನೆಯನ್ನು ಸಹೋದ್ಯೋಗಿಯೊಡನೆ ಹಂಚಿಕೊಂಡಿದ್ದಾರೆ. ಶಿಕ್ಷಣ ಇಲಾಖೆಯು ರೇಡಿಯೋ ಮೂಲಕ ನಡೆಸುವ 'ಕೇಳಿ–ಕಲಿ' ಕಾರ್ಯಕ್ರಮವು ಉಪಯುಕ್ತವೂ ಪ್ರಸ್ತುತವೂ ಆಗಿದೆ ಎಂದು ಭಾವಿಸುವ ಶ್ರೀಶೈಲ, ಅದನ್ನು ತಪ್ಪದೆ ನಾಲ್ಕು ಮತ್ತು ಐದನೆಯ ತರಗತಿಯ ಮಕ್ಕಳು ಕೇಳುವಂತೆ ಮಾಡಿದ್ದಾರೆ. ಒಂದು ಸಮುದಾಯ ಗ್ರಂಥಾಲಯವನ್ನೂ ಪ್ರಾರಂಭಿಸಿದ್ದು ಅದು ಅವರ ಕರ್ತೃತ್ವಶಕ್ತಿಗೂ ದೂರದೃಷ್ಟಿಗೂ ಉದಾಹರಣೆಯಾಗಿದೆ. ಮಕ್ಕಳು ಓದುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕೆಂಬ ಹಂಬಲದಿಂದ ಕೆಲವಾರು ಮಂದಿ ಸುಶಿಕ್ಷಿತ ಸದಸ್ಯರು ಅವರೊಂದಿಗೆ ಕೈಜೋಡಿಸಿದ್ದಾರೆ. ಶಾಲೆಯಲ್ಲಿ ಮಕ್ಕಳದ್ದೇ ಆದ ಒಂದು ಸಚಿವ ಸಂಪುಟವಿದ್ದು ಮಕ್ಕಳಿಗೆ ಜವಾಬ್ದಾರಿಗಳನ್ನು ಹಂಚಲಾಗಿದೆ. ಶಾಲೆಯ ಉದ್ಯಾನದ ಮೇಲ್ವಿಚಾರಣೆ, ಎಲ್ಲ ಸೌಕರ್ಯಗಳೂ ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವುದು, ಬೆಳಗಿನ ಶಾಲಾ ಸಭೆಯನ್ನು ಸಂಘಟಿಸುವುದು ಇವೆಲ್ಲಾ ಆ ಜವಾಬ್ದಾರಿಗಳಲ್ಲಿ ಸೇರಿವೆ. ಮಕ್ಕಳು ಜಗಳವಾಡದಂತೆ, ಹೊಡೆದಾಟಗಳು ನಡೆಯದಂತೆ ಎಲ್ಲರೂ

ಪ್ರಜ್ಞಾಪೂರ್ವಕವಾಗಿ ಎಚ್ಚರ ವಹಿಸುತ್ತಾರೆ. 'ಮಕ್ಕಳ ನಡುವೆ ಸಂಬಂಧಗಳು ಉತ್ತಮವಾಗಿದ್ದು ಅವರು ಎಲ್ಲಾ ಭಿನ್ನಾಭಿಪ್ರಾಯಗಳನ್ನು ಮಾತುಕತೆಗಳ ಮೂಲಕವೂ ಸಂಧಾನದ ಮೂಲಕವೂ ಬಗೆಹರಿಸಿಕೊಳ್ಳಲು ಯತ್ನಿಸುತ್ತಾರೆ' ಎಂದು ಶ್ರೀಶೈಲ ಹೇಳುತ್ತಾರೆ. ತಾನು ಶಾಲೆಯನ್ನು ಸೇರಿದಾಗಿನಿಂದ ಹಾಗೂ ಆರ್‌ಟಿಇ ಜಾರಿಯಾಗುವುದಕ್ಕೆ ಸಾಕಷ್ಟು ಮುಂಚೆಯೇ ಶಾಲೆಯಲ್ಲಿ ಮಕ್ಕಳಿಗೆ ದೈಹಿಕ ಶಿಕ್ಷೆ ನೀಡಿದ ಒಂದೇ ಒಂದು ಘಟನೆಯೂ ನಡೆದಿಲ್ಲ ಎನ್ನುವ ಶ್ರೀಶೈಲರಿಗೆ ಈ ಬಗ್ಗೆ ಹೆಮ್ಮೆಯಿದೆ.

ತನ್ನ ಶಕ್ತಿ ಸಾಮರ್ಥ್ಯಗಳು ಏನು ಎಂದು ಅವರಿಗೆ ಗೊತ್ತು. ಅವರು ಅದನ್ನು ಹೀಗೆಂದು ಪಟ್ಟಿ ಮಾಡುತ್ತಾರೆ: ಕೈಗೆತ್ತಿಕೊಂಡ ಕೆಲಸವನ್ನು ದಡಮುಟ್ಟಿಸುವ ಆತ್ಮವಿಶ್ವಾಸ, ಸ್ವಂತ ಸಂಪನ್ಮೂಲಗಳನ್ನು, ಗಳಿಕೆಯನ್ನು, ಮಕ್ಕಳಿಗೆ ಉಪಯುಕ್ತವಾಗುವ ಕಾರ್ಯಗಳಿಗೆ ವಿನಿಯೋಗಿಸುವುದು; ಅಧ್ಯಯನವನ್ನು ಮುಂದುವರೆಸಿ ಕರ್ನಾಟಕ ವಿಶ್ವವಿದ್ಯಾಲಯದ ಅಂಚೆ ತೆರಪಿನ ಶಿಕ್ಷಣದ ಮೂಲಕ ಬಿ.ಎ., ಎಂ.ಎ., ಬಿ.ಎಡ್. ಪದವಿಗಳನ್ನು ಪಡೆದು ಕೊಂಡಿರುವುದು; ಸಮುದಾಯಕ್ಕೆ ಕೊಡುಗೆ ನೀಡಬೇಕೆಂಬ ಆಕಾಂಕ್ಷೆ ಮತ್ತು ಬದ್ಧತೆ. ಸ್ವಯಂ ವಿಕಾಸ ಮತ್ತು ತನ್ನ ಸಾಮರ್ಥ್ಯವನ್ನು ನಿರಂತರವಾಗಿ ಬೆಳೆಸಿಕೊಳ್ಳುವುದು ಶ್ರೀಶೈಲ ಅವರಿಗೆ ತುಂಬಾ ಮುಖ್ಯವೆನಿಸುತ್ತದೆ. ಕೆಂಭಾವಿಯ ಟಿಎಲ್‌ಸಿಯಲ್ಲಿ ನಡೆಯುವ ವಿಟಿಎಫ್‌ಗಳಿಗೆ ಅವರು ತಪ್ಪದೆ ಹಾಜರಾಗುತ್ತಾರೆ. ಟಿಎಲ್‌ಸಿಯಲ್ಲಿ ಜೊತೆಯ ಶಿಕ್ಷಕರೊಂದಿಗೆ ಬ್ಯಾಡ್ಮಿಂಟನ್ ಮತ್ತು ವಾಲಿಬಾಲ್ ಆಡುತ್ತಾರೆ. ಇದೀಗ ಕಂಪ್ಯೂಟರ್ ಉಪಯೋಗಿಸಲು ಕಲಿತಿದ್ದಾರೆ. ಹೀಗೆ ತಮ್ಮನ್ನು ತಾವು ಉತ್ತಮಪಡಿಸಿಕೊಳ್ಳಲು ಶ್ರಮಿಸುವುದು ಅವರ ವ್ಯಕ್ತಿತ್ವದ ಅಂತರ್ಗತ ಗುಣವೇ ಇರಬೇಕು. ಒಂದು ಸಣ್ಣ ಶಾಲೆಯಲ್ಲಿ ಶಿಕ್ಷಕನಾಗಿ ಸೇರಿದ ಅವರು ಮುಖ್ಯೋಪಾಧ್ಯಾಯನಾಗಿಯೂ ಕೆಲಸ ಮಾಡಬೇಕಾಗಿ ಬಂತು. 2004ರಲ್ಲಿ ಮುಖ್ಯೋಪಾಧ್ಯಾಯರಿಗಾಗಿ ನಡೆದ ಹತ್ತು ದಿನಗಳ ತರಬೇತಿಗೆ ಹಾಜರಾದ ಅವರು ಒಂದೊಂದು ಅನುಭವದ ಆಣಿಮುತ್ತನ್ನು ಸಂಗ್ರಹಿಸಿಟ್ಟುಕೊಂಡು ಅದನ್ನು ತಮ್ಮ ಶಾಲೆಯಲ್ಲಿ ಅಳವಡಿಸಿಕೊಂಡರು, ವಿವೇಚನೆಯಿಂದ, ಪ್ರಾಯೋಗಿಕವಾಗಿ ಆಚರಣೆಗೆ ತಂದರು. ವಾಸ್ತವದಲ್ಲಿ ಶ್ರೀಶೈಲ ಅವರು ಸುರಪುರದಲ್ಲಿ ಸಿಎಫ್‌ಎಸ್‌ಐ ಕಾರ್ಯಕ್ರಮವು ಆರಂಭವಾದಾಗಿನಿಂದ ಅದರ ಸಹವರ್ತಿಯಾಗಿದ್ದಾರೆ. ಎಂ.ಎನ್. ಬೇಗ್[2]ರವರ ಮುಖ್ಯೋಪಾಧ್ಯಾಯರ ತರಬೇತಿ ಕಾರ್ಯಕ್ರಮದಲ್ಲಿ ಮತ್ತು ಸನ್ನಿ ತಾರಪ್ಪನ್[3] ಅವರ

2 ಎಂ. ಎನ್. ಬೇಗ್, ಕರ್ನಾಟಕ ಶಿಕ್ಷಣ ಇಲಾಖೆಯ ನಿವೃತ್ತ ನಿರ್ದೇಶಕರು, 2000ದ ಇಸವಿಯಲ್ಲಿ 'ನಲಿ–ಕಲಿ' ಯೋಜನೆಯನ್ನು ಜಾರಿಗೆ ತಂದಾಗ ಅದರ ನೇತೃತ್ವ ವಹಿಸಿದ್ದರು. 2004ರಿಂದ 2007ರವರೆಗೆ ಸುರಪುರದಲ್ಲಿ ಚೈಲ್ಡ್ ಫ್ರೆಂಡ್ಲಿ ಸ್ಕೂಲ್ ಇನಿಶಿಯೇಟಿವ್ (ಸಿಎಫ್‌ಎಸ್‌ಐ)ಗೆ ನೇತೃತ್ವ ನೀಡಿದವರು.

3 ಸನ್ನಿ ತಾರಪ್ಪನ್ ಅವರು ಮಂಗಳೂರು ಮೂಲದ ಮಾನವ ಸಂಪನ್ಮೂಲ ಅಭಿವೃದ್ಧಿಯ ತರಬೇತುದಾರರು. ಅವರು ಶಾಲೆಯ ಪ್ರಿನ್ಸಿಪಾಲರುಗಳಿಗೆ ಮತ್ತು ಸಾಮಾಜಿಕ ವಲಯದ ಸಂಘಟನಾಕಾರರಿಗೆ ದೊಡ್ಡ ಮಟ್ಟದಲ್ಲಿ ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸುತ್ತಾರೆ.

ಮುಖ್ಯೋಪಾಧ್ಯಾಯರ ದೊಡ್ಡ ಮಟ್ಟದ ಕಾರ್ಯಾಗಾರದಲ್ಲಿ ಶ್ರೀಶೈಲ ಭಾಗವಹಿಸಲು ಇದೇ ಸಂಸ್ಥೆಯೇ ನೆರವಾಯಿತು.

ಸಮಾಜವಿಜ್ಞಾನ ಮತ್ತು ಅದರ ಬೋಧನಾ ಕ್ರಮವನ್ನು ಕುರಿತಾದ ತಮ್ಮ ತಿಳಿವಳಿಕೆಯು ಬೇಸಿಗೆ ಕಾರ್ಯಾಗಾರದಿಂದ ತುಂಬಾ ಅಭಿವೃದ್ಧಿ ಹೊಂದಿತು ಎಂದು ಅವರು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಆ ಕಾರ್ಯಾಗಾರದ ಚರ್ಚೆಯ ವಿಷಯವನ್ನು ಅವರು ಬಹಳ ಚೆನ್ನಾಗಿ ನೆನಪಿನಲ್ಲಿರಿಸಿಕೊಂಡು, ಅದರ ಶೀರ್ಷಿಕೆಯನ್ನು ಸರಿಯಾಗಿ ಹೇಳಿದರು, "ನಕ್ಷೆಯನ್ನು ಓದುವುದು, ಬೇಟೆಗಾರರು ಮತ್ತು ಆಹಾರ ಸಂಗ್ರಾಹಕರನ್ನು ಆಧರಿಸಿದ ಸಮಾಜ ವಿಜ್ಞಾನದ ಕುರಿತಾದ ನೋಟ."

ಈ ಸಾಮರ್ಥ್ಯ ನಿರ್ಮಾಣದ ಕಾರ್ಯಾಗಾರಗಳು ಶಿಕ್ಷಣದ ಧ್ಯೇಯವನ್ನು ಕುರಿತಾದ ತಮ್ಮ ತಿಳಿವಳಿಕೆಯನ್ನು ವಿಶಾಲಗೊಳಿಸಿವೆ; ಬೋಧನೆ ಹಾಗೂ ವಿದ್ಯಾರ್ಥಿಗಳ ಕಲಿಕೆ ಕುರಿತಾದ ತಮ್ಮ ನಂಬಿಕೆಯನ್ನು ಬದಲಾಯಿಸಿವೆ ಎಂದು ಶ್ರೀಶೈಲ ಹೇಳುತ್ತಾರೆ. ಅವರ ಮಾತುಗಳಲ್ಲೇ ಕೇಳೋಣ: "ಮಕ್ಕಳು ಮಾಹಿತಿಗಳನ್ನು ತುಂಬಬೇಕಾದ ಖಾಲಿ ಕೊಡಗಳಲ್ಲ ಎಂದು ನಾನು ನಂಬಿದ್ದೇನೆ. ಬದಲಿಗೆ ನಾನು ಕೆಲಸದ ಪಟ್ಟಿಯನ್ನು ಉಪಯೋಗಿಸಿ ಮಕ್ಕಳೊಂದಿಗೆ ಪರಿಕಲ್ಪನೆಗಳನ್ನು ಚರ್ಚಿಸಿ ಅವರನ್ನು ಗುಂಪು ಚರ್ಚೆಗೆ ಬಿಟ್ಟು ಅವರೇ ತಮ್ಮ ತಿಳಿವಳಿಕೆಯನ್ನು ರೂಪಿಸಿಕೊಳ್ಳಲು ನೆರವಾಗುತ್ತೇನೆ. ಮಕ್ಕಳು ಭಯಮುಕ್ತ ವಾತಾವರಣದಲ್ಲಿ ಕಲಿಯುತ್ತಾರೆ ಎಂದು ನಾವು ಹೇಳುವಾಗ ಅದರ ಅರ್ಥ ಏನು ಎಂಬುದು ನನಗೆ ಅರ್ಥವಾಗಿದೆ. ತರಗತಿ ಕೊಠಡಿಯು ಕೇವಲ ಉಲ್ಲಾಸಮಯ ಕಲಿಕೆಯ ಜಾಗ ಮಾತ್ರವೇ ಅಲ್ಲ, ಅದು ಮಕ್ಕಳು ತಮ್ಮ ಪ್ರಶ್ನೆಗೆ ತಾವೇ ಉತ್ತರ ಕಂಡುಕೊಳ್ಳುವ ಜಾಗ ಸಹ; ಅಲ್ಲಿ ಅವರಿಗೆ ಪ್ರಶ್ನೆಗಳನ್ನು ಕೇಳುವ ಸ್ವಾತಂತ್ರ್ಯವಿರಬೇಕು. ಇದರಿಂದಾಗಿಯೇ ನಮ್ಮ ವಿದ್ಯಾರ್ಥಿಗಳು ಸಾಂಪ್ರದಾಯಿಕ ಪರೀಕ್ಷೆಗಳಲ್ಲೂ ಚೆನ್ನಾಗಿ ಸಾಧನೆ ಮಾಡುತ್ತಿದ್ದಾರೆ; ಮೊರಾರ್ಜಿ ಶಾಲೆಯ ಪ್ರವೇಶ ಪರೀಕ್ಷೆಯಲ್ಲೂ ಚೆನ್ನಾಗಿ ಮಾಡುತ್ತಿದ್ದಾರೆ." 'ನಲಿ–ಕಲಿ' ಕಾರ್ಯಕ್ರಮದ ಅಂತಃಸತ್ವವನ್ನು ಶ್ರೀಶೈಲ ಚೆನ್ನಾಗಿ ಗ್ರಹಿಸಿರುವುದಕ್ಕೆ ಅವರ ಈ ಮಾತುಗಳೇ ಸಾಕ್ಷಿ. ಒಬ್ಬ ಚಿಂತನಶೀಲ ಶಿಕ್ಷಕನಾಗಿ ಬೆಳೆಯುವಲ್ಲಿ ತನಗೆ ಸಿಎಫ್‌.ಎಸ್‌ಐ ನೀಡಿದ ಒಳನೋಟಗಳು ಮುಖ್ಯವಾದವು ಎಂದು ಅವರು ಸ್ಮರಿಸುತ್ತಾರಾದರೂ ತಮ್ಮ ಪ್ರಗತಿಗೆ ಕಲಿಕೆಯ ಕುರಿತಾದ ಅವರ ದೃಷ್ಟಿಕೋನವೇ ಇದಕ್ಕೆ ಕಾರಣ ಎಂದು ಅವರನ್ನು ಹತ್ತಿರದಿಂದ ಬಲ್ಲವರು ಹೇಳುತ್ತಾರೆ.

ಕ್ರೀಡೆಯ ಬಗ್ಗೆ ಗಾಢವಾದ ಆಸಕ್ತಿಯನ್ನು ಶಾಲಾದಿನಗಳಲ್ಲೇ ಹೊಂದಿದ್ದ ಶ್ರೀಶೈಲ ಪೊಲೀಸ್ ಆಗಬೇಕೆಂದಿದ್ದರು. ಆದರೆ ಪದವಿಪೂರ್ವ ಪರೀಕ್ಷೆಯಲ್ಲಿ ಒಳ್ಳೆಯ ಫಲಿತಾಂಶ ಬಂದ ಮೇಲೆ ಅವರು ಶಿಕ್ಷಕ ತರಬೇತಿ ಕೋರ್ಸಿಗೆ ಸೇರಿ ಶಿಕ್ಷಕರಾಗಬೇಕೆಂದು ನಿರ್ಧರಿಸಿದರು. ಈಗ ಯಾರೇ ಕೇಳಿದರೂ ಅವರು ಹೇಳುವ ಮಾತು; "ಅದು ನನ್ನ ಬದುಕಿನ ಅತ್ಯುತ್ತಮ ನಿರ್ಧಾರ."